

ಜಮೀನಿನಲ್ಲಿ ಕೂಲಿ ಕೆಲಸಕ್ಕೆ ಹೋಗುತೀನಿ, ಜೊತೆಗೆ ಗಂಡ ಆತ್ಮಹತ್ಯೆ ಮಾಡಿಕೊಂಡ ಮೇಲೆ ಗೌರ್ಮೆಂಟಿನಿಂದ ಕಾಸು ಬಂದಿರಬೇಕಲ್ಲ, ನಮ್ಮ ಸಾಲ ವಾಪಸು ಕೊಡು ಅಂತ ಸಾಲ ಕೊಟ್ಟವರ ವರಾತಗಳು... ಒಂದೆರಡಲ್ಲ ಕಷ್ಟಗಳು... ಬೆಳಗ್ಗೆಯಿಂದ ರಾತ್ರಿವರೆಗೂ ಮನೆಯಲ್ಲಿ, ಹೊಲದಲ್ಲಿ, ಕೊಟ್ಟಿಗೆಯಲ್ಲಿ ಕತ್ತೆಯಂತೆ ದುಡಿದ ನಂತರ ರಾತ್ರಿ ಬೆನ್ನಿಗೆ ಹಾಸಿಗೆ ಕಂಡರೆ ಸಾಕು ಅಂತ... ಅಲ್ಲಾ ಕುಂತರೆ ಐದು ಮಂದಿ ಹೊಟ್ಟೆ ಕೇಳಬೇಕಲ್ಲ ಎಂದಿದ್ದಳು. ಆ ಪ್ರಾಜೆಕ್ಟ್ ಮಾಡುತ್ತಿದ್ದ ತಂಡದವರಿಗೆ ಇದನ್ನು ಟ್ರಾನ್ಸ್‌ಕ್ರೈಬ್ ಮಾಡಿಕೊಟ್ಟ ನಂತರ ವಾರಗಟ್ಟಲೆ ವಿನುತಾ ಅದೇ ಗುಂಗಿನಲ್ಲಿಯೇ ಖಿನ್ನಳಾಗಿದ್ದಳು.

ಸಿದ್ಧಾರ್ಥ ಖ್ಯಾತ ಉದ್ಯಮಿಯಲ್ಲದೇ, ಇಂತಹ ಬಡರೈತನಾಗಿದ್ದರೆ ಅಥವಾ ಸಣ್ಣ ಉದ್ಯಮಿಯಾಗಿದ್ದರೆ ಹತ್ತರಲ್ಲಿ ಹನ್ನೊಂದು ಎಂಬಂತೆ ಅದು ಬರಿಯ ಸುದ್ದಿ ಮಾತ್ರವಾಗಿ, ಮೇಗಲೆಯ ಗಮನಕ್ಕೆ ಬರುತ್ತಿರಲಿಲ್ಲವೇನೋ... ಸಿರಿವಂತರ ದುರಂತಗಳಿಗೆ ಮನಮಿಡಿದಂತೆ ಬಡವರ ದುರಂತಗಳಿಗೆ ಮನ ಮಿಡಿಯುವುದಿಲ್ಲ ಎಂಬುದು ತನ್ನ ತಕರಾರೆ... ಆದರೆ, ಇದಲ್ಲದಿದ್ದರೆ ಇನ್ನಾರದೋ ಆತ್ಮಹತ್ಯೆ ಇವಳನ್ನು ಅಲ್ಲಾಡಿಸುತ್ತಿತ್ತೇನೋ ಯಾರಿಗೆ ಗೊತ್ತು... ಭೂಮಿಯಾಳದ ಅದಾವುದೋ ಶಿಲಾಸ್ತರ ಒಂದು ಕ್ಷಣ ಕಂಪಿಸಿ ಅಲುಗಾಡಿದ್ದೇ ಫಕ್ಕನೆ ಭಾರೀ ಭೂಕಂಪನವಾಗುವಂತೆ ಇವಳೂ ಇನ್ನಾವುದೋ ಆತ್ಮಹತ್ಯೆಯ ಸುದ್ದಿಯಿಂದ ತಲ್ಲಣಿಸುತ್ತಿದ್ದಳೇನೋ... ಹೀಗೆಲ್ಲ ಅಂದುಕೊಳ್ಳುವಾಗ ಯಾಕೋ ತಾನು ಒರಟಾಗಿ ಮಾತಾಡಿದೆ... ಯಾರಲ್ಲೂ ಹೇಳಿ ಕೊಳ್ಳದವಳು ತನ್ನಲ್ಲಿ ಹೇಳಿಕೊಂಡಿದ್ದಾಳೆ, ತನ್ನಲ್ಲಿಯೂ ಹೇಳಿಕೊಳ್ಳುವುದನ್ನು ನಿಲ್ಲಿಸಿಬಿಟ್ಟರೆ, ಕೆಂಡದುಂಡೆಗಳು ಅವಳನ್ನು ಒಳಗೊಳಗೇ ದಹಿಸಿಬಿಟ್ಟರೆ... ಈ 'ರೆ'ಗಳು ವಿನುತಾಳಿಗೆ ಅರೆಕ್ಷಣ ಮೈಯಿಡೀ ನಡುಕ ಹುಟ್ಟಿಸಿತು. ಛೇ ಯಾಕಿಷ್ಟು ಎಲ್ಲದಕ್ಕೆ ಕಿರಿಕಿರಿ ಮಾಡಿಕೊಳ್ಳುತ್ತೇನೆ